## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 740/2024

**ಸಾಕ್ಷಿಯನ್ನು ದಿಃ 02.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಚೆಲುವರಾಜು | ಸಿಡಬ್ಲ್ಯೂಃ 7 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಹನುಮಂತಯ್ಯ | | |
| ವಯಸ್ಸು | 48 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಬೀಜಗನಹಳ್ಳಿ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನಿಪಿ–2ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. 2024ರಲ್ಲಿ ಒಂದು ದಿನ ನಿಪಿ–2(ಬಿ) ಸಹಿಯನ್ನು ನನ್ನ ಊರಿನಲ್ಲಿ ಚಾಸಾ–2 ರವರ ಮನೆಯ ಮುಂದೆ ಮಾಡಿದ್ದೇನೆ. ಸದರಿ ಸಹಿಯನ್ನು ಪೋಲೀಸರ ಕೋರಿಕೆಯ ವಮೇರೆಗೆ ಹಾಕಿದ್ದೇನೆ. ನನ್ನ ಜೊತೆ ಚಾಸಾ–8 ರವರು ಇದ್ದರು. ಸದರಿ ಸಹಿ ಹಾಕಿದಾಗ ಮಧ್ಯಾಹ್ನ 1 ರಿಂದ 2 ಗಂಟೆಯಾಗಿತ್ತು. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ತೆಗೆದುಕೊಂಡಿಲ್ಲ. ನಿಪಿ–2 ರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ.

ಸಾಕ್ಷಿ ನಿಪಿ–3ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ನಿಪಿ–2ಕ್ಕೆ ಸಹಿ ಹಾಕಿದಾಗಲೇ ನಿಪಿ–3 ಕ್ಕೆ ಸಹಿ ಹಾಕಿದ್ದೇನೆ. ನಿಪಿ–3(ಬಿ) ಸಹಿಯನ್ನು ಹಾಕಿದಾಗ ಮಧ್ಯಾಹ್ನ 1 ರಿಂದ 2 ಗಂಟೆಯಾಗಿತ್ತು. ನಿಪಿ–3ಕ್ಕೆ ನನ್ನ ಜೊತೆ ಚಾಸಾ–8 ರವರು ಸಹಿ ಹಾಕಿದ್ದಾರೆ. ನಿಪಿ–3 ರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ದಿಃ 26-11-2024ರಂದು ಪೋಲಿಸರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 1ನೇ ಆರೋಪಿಯ ಮನೆಯ ಬಳಿ ಬಂದಾಗ ಚಾಸಾ-1 ರವರು ಹಾಜರಿದ್ದು, ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-8 ರವರ ಸಮಕ್ಷಮ ನಿಪಿ-2ರ ಮಹಜರನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-2ರ ಮಹಜರು ಕಾಲಕ್ಕೆ ಚಾಸಾ-1 ರವರು ಹಾಜರುಪಡಿಸಿದ ನಿಪಿ-4 ರಿಂದ 8ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ದಿನ ಚಾಸಾ-2 ರವರ ಮನೆಯ ಮುಂದೆ ಚಾಸಾ-1 ರವರು ಹಾಜರಿದ್ದು, ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-8 ರವರ ಸಮಕ್ಷಮ ಮಧ್ಯಾಹ್ನ 2.15 ರಿಂದ 3.15ರವರೆಗೆ ನಿಪಿ-3ರ ಮಹಜರನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ನನಗೆ ನಿಪಿ-2 ಮತ್ತು 3ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-4 ರಿಂದ 8 ನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. JSA ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.